ಸಿಸಿ.ನಂ.58/2024
ಪಿ ಡಬ್ಲ್ಯೂ-2

<u>ದಿ:**17.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಆರೋಪಿ ಪರ G.S.L., ವಕೀಲರಿಂದ:-

ಅಪಘಾತವಾದ ದಿನದಂದು ಜೋರಾಗಿ ಮಳೆ ಬರುತ್ತಿದ್ದು ಎಂದರೆ ಸಾಕ್ಷಿ ಸ್ವಲ್ಪ ಮಳೆ ಬರುತ್ತಿತ್ತು ಎಂದು ಹೇಳುತ್ತಿದ್ದರು . ಮಳೆ ಜೋರಾಗಿ ಬರುತ್ತಿದ್ದ ಕಾರಣ ಆರೋಪಿಯು ತಾವು ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನ **KA-17-HH-6280** ವಾಹನವನ್ನು ರಸ್ತೆಯ ಎಡಭಾಗಕ್ಕೆ ನಿಲ್ಲಿಸಿ ಮರದ ಕೆಳಗಡೆ ನಿಂತಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ರಸ್ತೆಯ ಎಡಬದಿಯಲ್ಲಿ ನಿಲ್ಲಿಸಿದ ಬೈಕ್ ಗೇ ನಾನೇ ಅತೀವೇಗ ಮತ್ತು ಅಜಾಗರೂಕತೆಯಿಂದ ಜಗಳೂರು ಕಡೆಯಿಂದ ಓಡಿಸಿಕೊಂಡು ನಿಂತಿದ್ದ ಆರೋಪಿ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆದ ಕಾರಣ ಆರೋಪಿಗೂ ಸೊಂಟಕ್ಕೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಡಿಕ್ಕಿ ಪಡಿಸಿದ ಕಾರಣ ಆರೋಪಿಯು ಮೊದಲಿಗೆ ದಿ: **30.07.2023** ರಂದು ದೂರನ್ನು ಈ ಪ್ರಕರಣದಲ್ಲಿ ನೀಡಿರುತ್ತಾರೆ ಎಂದರೆ ಸರಿ. ಆರೋಪಿ ಅಪಘಾತ ಪಡೆಸಿರುತ್ತಾರೆ ಎಂದು ನಾನು ಆರೋಪಿ ವಿರುದ್ದ ದೂರನ್ನು ನೀಡಿರುವುದಿಲ್ಲ . ನಾನು ಮತ್ತು ಚಾಸಾ-1 ರವರು ಪೋಲೀಸರೊಂದಿಗೆ ಶಾಮೀಲಾಗಿ ಆರೋಪಿ ನಮ್ಮ ಮೇಲೆ ದೂರು ನೀಡಿದ್ದರು ಸಹ ನಾವು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಬಳಿ ವಾಹನ ಚಲಾವಣೆ ಪರವಾನಗೆ ಇರುವುದಿಲ್ಲ ಎಂದರೆ ಸರಿ. ಆದ ಕಾರಣ ನ್ಯಾಯಾಲಯದಿಂದ ಪರಿಹಾರ ಪಡೆಯಲು ಪೋಲೀಸರೊಂದಿಗೆ ಶಾಮೀಲಾಗಿ ಆರೋಪಿಯೇ ತಪ್ಪು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ಬೈಕ್ ಗಳು ಮುಖಾ ಮುಖಿ ಅಪಘಾತ ಆಗಿರುತ್ತದೆ . ಒಂದು ವೇಳೇ ಮುಖಾ ಮುಖಿ ಅಪಘಾತವಾದಲ್ಲಿ ನನ್ನ ಮತ್ತು ಆರೋಪಿ ವಾಹನದ ಮುಂದೆ ಜಖಂ ಆಗುತ್ತವೆ ಎಂದರೆ ಸರಿಯಲ್ಲ. ನಿಪಿ 1 ಪೋಟೋದಲ್ಲಿ ಕಾಣುವ ಮುಂದೆ ಭಾಗ ಜಖಂ ಗೊಂಡಿರುವ ವಾಹನ ನಾನು ಚಲಾಯಿಸುತ್ತಿದ್ದ ವಾಹನ ಇರುತ್ತದೆ . ಮತ್ತೊಂದು ವಾಹನವು ಆರೋಪಿ ಚಲಾಯಿಸುತ್ತಿದ್ದ ವಾಹನ

ಇರುತ್ತದೆ . ನಿಪಿ 1 ಫೋಟೋದಲ್ಲಿ ಕಾಣುವ ಆರೋಪಿ ವಾಹನವು ಮುಂದೆ ಭಾಗ ಜಖಂ ಗೊಂಡಿರುವುದಿಲ್ಲ ಎಂದರೆ ಸರಿ. ನಾನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಆರೋಪಿಯ ಹಿಂದೆ ಭಾಗಕ್ಕೆ ಡಿಕ್ಕಿ ಪಡಿಸಿರುತ್ತೇನೆ . ಆದ ಕಾರಣ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿರುತ್ತದೆ ಹೋರತು , ಆರೋಪಿ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u>: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು